ಪಿ.ಡಬ್ಲ್ಯೂ1 ಸಿ. ಸಿ.ನಂ. 3690/2021

ದಿನಾಂಕಃ 09-02-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರಿದ ಪಾಟೀಸವಾಲು ಆರೋಪಿ ಪರ ವಕೀಲರಾದ ಶ್ರೀ ಎ ಆರ್. ವಕೀಲರಿಂದಃ

ಮನೆಗಳನ್ನು ಬಾಡಿಗೆಗೆ ಕೊಟ್ಟಿರುವ ಬಗ್ಗೆ ಯಾರಿಗೆ ಬಾಡಿಗೆಗೆ ಕೊಟ್ಟಿರುತ್ತೀರಾ ಅಂತ ದಾಖಲೆಗಳನ್ನು ನ್ಯಾಯಾಲಯಕಕ್ಕೆ ಕೊಟ್ಟಿರುತ್ತೀರಾ ಎಂದರೆ ಇಲ್ಲ. ನಾನು ಈಗ ಲಗುನಾಯಕನ ಹಳ್ಳಿಯಲ್ಲಿ ಅಂಗನವಾಡಿ ಕಾರ್ಯರ್ತೆಯಾಗಿ ಕೆಲಸ ಮಾಡುತ್ತಿದ್ದೇನೆ. ಬ್ಯಾಂಕ್ ವ್ಯವಹಾರದ ಬಗ್ಗೆ ನನಗೆ ಗೊತ್ತಿರುತ್ತದೆ. ಬ್ಯಾಂಕ್ ನಿಂದ ಚೆಕ್ ಬುಕ್ ಪಡೆದುಕೊಂಡಿರುತ್ತೀರಿ ಎಂದರೆ ಪಡೆದುಕೊಂಡಿರುತ್ತೇನೆ. ಆರೋಪಿಗೆ 5 ಲಕ್ಷ ರೂ ಹಣವನ್ನು ಚೆಕ್ ಮೂಲಕ ಹಣ ಕೊಡಲು ತೊಂದರೆ ಇತ್ತಾ ಎಂದರೆ ತೊಂದರೆ ಇರಲಿಲ್ಲ ಆದರೆ ಮನೆಯಲ್ಲಿ ನಗದು ಹಣ ಇದ್ದು ಕೊಟ್ಟಿರುತ್ತೇನೆ. ವಾರ್ಷಿಕವಾಗಿ ನಿಮಗೆ ಎಷ್ಟು ಆದಾಯ ಬರುತ್ತದೆ ಎಂದರೆ ಸರಿಯಾಗಿ ನೆನಪಿರುವುದಿಲ್ಲ. ನಿಮ್ಮ ಮಕ್ಕಳಿಗೆ ತಿಂಗಳಿಗೆ ಎಷ್ಟು ಎಷ್ಟು ಸಂಬಳ ಬರುತ್ತಿದೆ ಅಂತ ಗೊತ್ತಿರುವುದಿಲ್ಲ ಎಂದರೆ ಗೊತ್ತಿದೆ.

ನಿಪಿ-6 ರಲ್ಲಿ ಇರುವ ಸಹಿ ಆರೋಪಿಯದ್ದು ಅಲ್ಲ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಇರುವ ಬರವಣಿಗೆಗೂ ಸಹಿಗೂ ವ್ಯಾತ್ಯಾಸ ಇದೆ ಎಂದರೆ ಅವರೇ ಬರೆದುಕೊಟ್ಟಿರುತ್ತಾರೆ. ಟಪಾಲು ಸುರೇಶ್ ರವರ ಮಾತು ಕೇಳಿ ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಯಾವುದೇ ಮನೆಗಳನ್ನು ಬಾಡಿಗೆಗೆ ಕೊಟ್ಟಿರುವುದಿಲ್ಲ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನನಗೆ ಪಡಿತರ ಚೀಟಿ ಇದೆ. ಬಿ ಪಿ ಎಲ್ ಪಡಿತರ ಚೀಟಿ ಇದೆ. ಬಿ ಪಿ ಎಲ್ ಪಡಿತರ ಚೀಟಿ ಕೊಡುವುದು ತುಂಬಾ ಬಡತನದ ರೇಖೆಗಿಂತ ಕಡಿಮೆ ಇರುವವರಿಗೆ ಮಾತ್ರ ಕೊಡುವುದು ಎಂದರೆ ಸಾಕ್ಷಿಯು ನನಗಿಂತ ಶ್ರೀಮಂತರಿಗೂ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಮಗೆ ಬಿ ಪಿ ಎಲ್ ಪಡಿತರ ಚೀಟಿ ಇರುವುದರಿಂದ ನಿಮಗೆ 5 ಲಕ್ಷ ರೂ ಹಣ ಕೊಡುವ ಸಾಮರ್ಥ ಇರುವುದಿಲ್ಲ ಎಂದರೆ ಸರಿಯಲ್ಲ ನನ್ನ ಮಕ್ಕಳು

ಸಂಪಾಧನೆ ಮಾಡುತ್ತಾರೆ. ನನ್ನ ಮಕ್ಕಳು ಟಾಟಾ ಕ್ರೋಂ ಕಂಪನಿಯಲ್ಲಿ ಮತ್ತೊಬ್ಬರು ಸಿವಿಲ್ ಇಂಜಿನಿಯರ್ ಕೆಲಸ ಮಾಡುತ್ತಾರೆ. ಆರೋಪಿ ನಿಮ್ಮಿಂದ ಹಣ ಕೇಳುವ ಯಾವುದೇ ಪ್ರಮೇಯ ಇರುವುದಿಲ್ಲ ನೀವು ಅವರಿಗೆ ಹಣ ಕೊಟ್ಟಿರುವುದಿಲ್ಲ ಟಪಾಲು ಸುರೇಶ್ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಆರೋಪಿಗೆ ಯಾವುದೇ ನೋಟೀಸು ಕಳುಹಿಸಿರುವುದಿಲ್ಲ ಆರೋಪಿಯ ಸುಳ್ಳು ವಿಳಾಸ ಕೊಟ್ಟು ನೋಟೀಸು ಜಾರಿಯಾಗಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.